ಈ) ಹಾಗಿದ್ದಲ್ಲಿ, ನಿಯಮ ಉಲ್ಲಂಘಿಸಿದವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಬೃಹತ್ ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲ ಭೂತ ಸೌಕರ್ಯ ಸಚಿವರು) :

ಅ) ಮೈಸೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿರುವ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಈ ಕೆಳಕಂಡಂತಿರುತ್ತವೆ:

1. ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು 52
2. ಸಣ್ಣ ಪ್ರಮಾಣದ ಕೈಗಾರಿಕೆಗಳ 7580

ಆ) ಕನ್ನಡಿಗರು : 43220

ಆ) ಕನ್ನಡೇತರರು : 4803

ಇ) ಡಾ॥ ಸರೋಜಿನಿ ಮಹಿಷಿ ವರದಿ ಪ್ರಕಾರ ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ರಾಜ್ಯ ಕೈಗಾರಿಕಾ ನೀತಿಯನ್ವಯ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಘಟಕಗಳು ಸಿ ಮತ್ತು ಡಿ ಗುಂಪಿನ, ಹುದ್ದೆಗಳಿಗೆ ಶೇ.100 ರಷ್ಟು ಕನ್ನಡಿಗರನ್ನೇ ನೇಮಿಸಬೇಕು ಹಾಗೂ ಒಟ್ಟು ಕಾರ್ಮಿಕರಲ್ಲಿ ಶೇ.80 ರಷ್ಟು ಕನ್ನಡಿಗರಿಗೆ ಉದ್ಯೋಗವಾಕಾಶ ನೀಡಬೇಕೆಂಬ ಷರತ್ತನ್ನು ವಿಧಿಸಲಾಗಿದೆ. 50 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಘಟಕಗಳಲ್ಲಿ ಈ ಷರತ್ತು ಪಾಲನೆ ಬಗ್ಗೆ ಪರಿಶೀಲನ ಜವಾಬ್ದಾರಿಯನ್ನು ಜಿಲ್ಲಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿನ ಏಕಗವಾಕ್ಷಿ ಸಮಿತಿಗೆ ವಹಿಸಲಾಗಿದೆ ಮತ್ತು ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪರಿಶೀಲಿಸುವಂತೆ ಸೂಚಿಸಿದೆ.

ಈ) ನಿಯಮ ಉಲ್ಲಂಘಿಸಿದ ಅಥವಾ ಸಂಪೂರ್ಣವಾಗಿ ಪಾಲಿಸದ ಘಟ್ಟಕಗಳಿಗೆ ಸರ್ಕಾರದಿಂದ ನೀಡಲಾಗುವ ರಿಯಾಯಿತಿಗಳು/ ತೆರಿಗೆ ವಿನಾಯಿತಿ ಸೌಲಭ್ಯಗಳನ್ನು ತಡೆಯಲಾಗುತ್ತದೆ ಹಾಗೂ ನಿಗದಿತ ಪ್ರಮಾಣದಲ್ಲಿ ಕನ್ನಡಿಗರಿಗೆ / ಸ್ಥಳೀಯರಿಗೆ ಉದ್ಯೋಗವಕಾಶ ನೀಡಲು ಒತ್ತಾಯಿಸಲಾಗುತ್ತಿದೆ.

476(1119) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ, ವಿಧಾನ ಸಭಾ ಸದಸ್ಯರು (ಚಾಮರಾಜ) ಮಾನ್ಯ ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳಾವುವು ಹಾಗೂ ಮೂಲ ಭೂತ ಸೌಕರ್ಯಗಳೇನು ? (ವಿವರ ಒದಗಿಸುವುದು)

ಆ) ಮೂಲಭೂತ ಸೌಕರ್ಯ ಹೆಚ್ಚಿಸುವ ಬಗ್ಗೆ ಉದ್ದಿಮೆದಾರರಿಂದ ಕೋರಿಕೆ ಸಲ್ಲಿಸಲಾಗಿದೇಯೇ?

ಇ) ಹಾಗಿದಲ್ಲಿ ಸೌಕರ್ಯ ಹೆಚ್ಚಿಸಲು ಸರ್ಕಾರ ಕೈಗೂಂಡ ಕ್ರಮಗಳೇನು ಹಾಗೂ ತಗಲುವ ಬಾಬ್ತು ಎಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೈಸೂರು ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈ ಕೆಳಗಿನ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕೈಗಾರಿಕಾ ಪ್ರದೇಶ	ವಿಸ್ತೀರ್ಣ (ಎಕರೆಗಳಲ್ಲಿ)	ರಸ್ತೆ (ಕಿ.ಮೀ)	ದಾರಿದೀಪ
1.	ಮೈಸೂರು – ಹೆಬ್ಬಾಳ್	1603.00	29.00	
2.	ಮೈಸೂರು ಬೆಳಗೂಳ (ಮೇಟಗಳ್ಳಿ)	519.00	4.40	
3.	ಮೈಸೂರು – ಹೂಟಗಳ್ಳಿ	426.00	7.00	854
4.	ಮೈಸೂರು ಬೆಳವಾಡಿ	238.00	1.60	
5.	ನಂಜನಗೂಡು	564.00	4.02	146
6.	ತಾಂಡ್ಯ	144.00	1.00	77
	ಒಟ್ಟು	**3494.00**	**47.02**	**1077**

ಮೇಲಿನ ಕೈಗಾರಿಕಾ ಪ್ರದೇಶಗಳಲ್ಲಿ ಎಲ್ಲಾ ನಿವೇಶನಗಳಿಗೂ ರಸ್ತೆ ಮತ್ತು ದಾರಿ ದೀಪಗಳ ಸೌಕರ್ಯಗಳನ್ನು ಒದಗಿಸಲಾಗಿದೆ. ಹಾಗೂ ಮೈಸೂರಿನ ಕೈಗಾರಿಕಾ ಪ್ರದೇಶದ ಕೈಗಾರಿಕ ಘಟಕಗಳಿಗೆ ಕೆ.ಆರ್.ಎಸ್ ನಾಲೆಯಿಂದ ಮತ್ತು ಕೊಳವೆ ಬಾವಿಗಳಿಂದ ನೀರು ಸರಬರಾಜು ಒದಗಿಸಲಾಗಿದೆ ಮತ್ತು ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ 1 ಎಂ.ಜಿ.ಡಿ ಸ್ವತಂತ್ರ ನೀರು ಸರಬರಾಜು ಯೋಜನೆ ಮತ್ತು ತಾಂಡ್ಯ ಕೈಗಾರಿಕಾ ಪ್ರದೇಶದ ಕೈಗಾರಿಕಾ ಘಟಕಗಳಿಗೆ ಹಾಗೂ ಏಕ ಘಟಕ ಕೈಗಾರಿಕೆಗಳಿಗೆ 5 ಎಂ.ಜಿ.ಡಿ. ಸ್ವತಂತ್ರ ನೀರು ಸರಬರಾಜು ಯೋಜನೆ ಸೌಲಭ್ಯವನ್ನು ಒದಗಿಸಲಾಗಿದೆ.

ಆ) ಮುಖ್ಯವಾಗಿ ರಸ್ತೆಗಳನ್ನು ಹಾಗೂ ದಾರಿದೀಪಗಳನ್ನು ಉತ್ತಮ ಸ್ಥಿತಿಯಲ್ಲಿಡಲು ಉದ್ದಿಮೆದಾರರಿಂದ ಕೋರಿಕೆ ಬಂದಿರುತ್ತದೆ. ಸದರಿ ಬೇಡಿಕೆಗಳನ್ನು ನೆರವೇರಿಸಲು ಮಂಡಳಿಯು ಆಗಿಂದಾಗ್ಗೆ ಕ್ರಮಕೈಗೊಳ್ಳುತ್ತಿದೆ.

ಇ) ನಿವೇಶನದ ಪ್ರಾರಂಭಿಕ ಮಾರಾಟದ ನಂತರ ಕೈಗಾರಿಕಾ ಪ್ರದೇಶಗಳ ಉದ್ದಿಮೇದಾರರಿಂದ ಮಂಡಳಿಗೆ ತದನಂತರ ಯಾವುದೇ ವಾರ್ಷಿಕ ನಿರ್ವಹಣ ವೆಚ್ಚ : ಅದಾಯವಿಲ್ಲದಿರುವುದರಿಂದ ಉದ್ದಿಮೆದಾರರ ಕೋರಿಕೆಯಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಕೈಗಾರಿಕಾ ಪ್ರದೇಶ ಅಭಿವೃದ್ದಿ ಪಡೆದ ನಂತರ ಅದನ್ನು "ಕೈಗಾರಿಕಾ ನಗರವೆಂದು" ಘೋಷಿಸಿ ಇತ್ತೀಚೆಗೆ ಕರ್ನಾಟಕ ಮುನಿಸಿಪಾಲಿಟಿ ಕಾಯಿದೆಗೆ ತರಲಾದ ತಿದ್ದುಪಡಿಯ ಆಧಾರದ ಮೇಲೆ ಸ್ವಯಂ ನಿರ್ವಹಣಾ ಆಧಿಕಾರವನ್ನು ನೀಡಬೇಕಿದೆ ಅಥವಾ ಸ್ಥಳೀಯ ನಗರಾಡಳಿತ ಅಥವಾ ಸ್ಥಳೀಯ ಕೈಗಾರಿಕಾ ಸಂಘಗಳು ವಾರ್ಷಿಕ ಕಾಮಗಾರಿ ನಿರ್ವಹಣಾ ಜವಾಬ್ದಾರಿಯನ್ನು ಹೊರಲು ಮುಂದು ಬಂದಿಲ್ಲಿ ಬಂದು ಬಾರಿ ಕೆ.ಐ.ಎ.ಡಿ.ಬಿ ಸಂಸ್ಥೆ ಖರ್ಚಿನಲ್ಲಿ ರಸ್ತೆ, ದಾರಿ ದೀಪ, ಚರಂಡಿ ವ್ಯವಸ್ಥೆಯನ್ನು ಉತ್ತಮ ಗೊಳಿಸಿ ಹಸ್ತಾಂತರ ಮಾಡಬಹುದಾಗಿದೆ. ಇದಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಒಂದು ಯೋಜನೆಯನ್ನು ಸಹ ಘೋಷಿಸಿದೆ.